ಅ) ಶಾಲೆಗಳನ್ನು ನಿರ್ವಹಿಸಲು, ವೇತನ ಇತ್ಯಾದಿ ಸೇರಿದಂತೆ ಬೋಧನೆ ಮತ್ತು ಇತರೆ ಉದ್ದೇಶಗಳಿಗಾಗಿ 1990-91ನೇ ಸಾಲಿನ ಒಟ್ಟು ವೆಚ್ಚ?

ಇ) ಈ ಶಾಲೆಗಳನ್ನು ನಡೆಸುವ ಸಲುವಾಗಿ ಖರ್ಚು ಮಾಡಿದ ಎಲ್ಲಾ ವೆಚ್ಚವನ್ನು ಸರ್ಕಾರ ಹಣ ಭರ್ತಿ ಹಾಕಿ ಕೊಟ್ಟಿದೆಯೇ?

ಈ) ಹಾಗಿಲ್ಲದಿದ್ದಲ್ಲಿ ಈ ನಗರಪಾಲಿಕೆಯ ಶಾಲೆಗಳನ್ನು ಸರ್ಕಾರಕ್ಕೆ ವಹಿಸಿಕೊಡಲು ಏನಾದರೂ ಪ್ರಸ್ತಾವನೆ ಇದೆಯೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) 1) ಶಿಶುವಿಹಾರಗಳು 75

2) ಪ್ರಾಥಮಿಕ ಶಾಲೆಗಳು 8

3) ಪ್ರೌಢಶಾಲೆಗಳು 33

ಆ) ರೂ. 4,27,83,000-00

ಇ) ಅನುಧಾನ ಸಂಹಿತೆ ಪ್ರಕಾರ 1985ಕ್ಕೆ ಮುಂಚೆ ಪ್ರಾರಂಭವಾದ ಹಾಗೂ 1985ರ ನಂತರ ಪ್ರಾರಂಭಿಸಲಾದ ನಗರಪಾಲಿಕೆಯ ಶಾಲಾ ಮತ್ತು ಕಾಲೇಜುಗಳು ಕ್ರಮವಾಗಿ ಪ್ರಾರಂಭಿಸಿದ 5 ಮತ್ತು 7 ವರ್ಷಗಳ ನಂತರ, ಅನುದಾನವನ್ನು ಪಡೆಯುವ ಅರ್ಹತೆ ಹೊಂದಿರುತ್ತವೆ. 1979-80ರಿಂದ ಬೆಂಗಳೂರು ಮಹಾನಗರ ಪಾಲಿಕೆಗೆ 11,214,20,000 ರೂ. ಅನುದಾನ ಬರಬೇಕಾಗಿದ್ದು ಸರ್ಕಾರಕ್ಕೆ 89-90ರ ವರೆಗೆ 9,24,86,494-52ರೂ.ಗಳ ಶಿಕ್ಷಣ ತೆರಿಗೆಯನ್ನು ನಗರಪಾಲಿಕೆಯು ಕಟ್ಟಬೇಕಾಗಿದೆ. ಇದನ್ನು ನಗರಪಾಲಿಕೆಗೆ ಕೊಡಬೇಕಾದ ಅನುಧಾನದಲ್ಲಿ ಕಡಿತಗೊಳಿಸಿದರೆ, ಬೆಂಗಳೂರು, ಮಹಾನಗರ ಪಾಲಿಕೆಗೆ, 1,99,33,505-48 ರೂ. ಅನುಧಾನ ಬರಬೇಕಾಗಿದೆ.

ಬೆಂಗಳೂರು ಮಹಾನಗರ ಪಾಲಿಕೆಯ ಖರೀದಿಸಿದ ಮಾರುತಿ ವ್ಯಾನು ಮತ್ತು ಕಾರುಗಳು

2623 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕೇಪೇಟೆ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಬೆಂಗಳೂರು ಮಹಾನಗರ ಪಾಲಿಕೆಯು ಖರೀದಿಸಿದ ಮಾರುತಿ ವ್ಯಾನು ಕಾರುಗಳ ಸಂಖ್ಯೆ ಎಷ್ಟು?

ಆ) 30-6-91ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿದ್ದ ಮಾರುತಿ ವ್ಯಾನು ಕಾರುಗಳ ಒಟ್ಟು ಸಂಖ್ಯೆ ಎಷ್ಟು?

ಇ) ಈ ಮಾರುತಿ ವ್ಯಾನು ಕಾರುಗಳನ್ನು ಖರೀದಿಸಲು ಸಂದಾಯ ಮಾಡಿದ ಹಣವೆಷ್ಟು?

ಈ) ಮಾರುತಿ ವ್ಯಾನು ಕಾರುಗಳಿಗಾಗಿ ಬದಲಾಯಿಸಿದ ಹಳೆಯ ಕಾರುಗಳನ್ನು ಹರಾಜು ಹಾಕಲಾಗಿತ್ತೆ?

ಉ) ಹಾಗಿದ್ದರೆ ಎಷ್ಟು ಕಾರುಗಳನ್ನು ಹರಾಜು ಹಾಕಲಾಗಿದೆ ಮತ್ತು ಇದರಿಂದ ಉತ್ಪತ್ತಿಯಾದ ಹಣ ವೆಷ್ಟು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) 30

ಆ) 31

ಇ) ರೂ. 37,35, 570-00

ಈ) ಈ ಮಾರುತಿ ವ್ಯಾನುಗಳನ್ನು ಕೊಳ್ಳಲು ಬದಲಾಯಿಸಿದ 16 ಜೀಪ್‌ಗಳನ್ನು ಟೆಂಡರ್-ಕಂ-ಆಕ್ಷನ್‌ಗೆ ಇಡಲಾಯಿತು. ಈ 16 ವಾಹನಗಳಿಗೆ 13ಕ್ಕೆ ಮಾತ್ರ ಸರಿಯಾದ ಹರಾಜು ಬಂದಿದ್ದು ಉಳಿದ 3 ವಾಹನಗಳಿಗೆ ಹರಾಜುದಾರರು ಡಿಪಾಸಿಟ್ ಕಟ್ಟದೇ ಇರುವ ಪ್ರಯುಕ್ತ ಇವುಗಳನ್ನು ತಿರಸ್ಕರಿಸಿ, ಈ ಮೂರು ವಾಹನಗಳನ್ನು ಮರು ಹರಾಜು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಮೇಲ್ಕಂಡ 13 ವಾಹನಗಳ ಹರಾಜಿನಿಂದ ಮಹಾನಗರ ಪಾಲಿಕೆಗೆ ಬಂದ ಹಣ 5,69,200-00 ರೂ.ಗಳು. ಉಳಿದ ಕಾರುಗಳನ್ನು ಸಹ ಸದ್ಯದಲ್ಲಿಯೇ ಹರಾಜು ಮಾಡಲಾಗುವುದು.

ತುಮಕೂರು ಜಿಲ್ಲೆ ತಿಪಟೂರಿನಲ್ಲಿ ಇರುವ ಕಲ್ಪತರು ಕಾಲೇಜಿನಲ್ಲಿ ಸಾಮೂಹಿಕ ಅತ್ಯಾಚಾರ ಘಟನೆ ನಡೆದಿರುವುದರ ಕುರಿತು

2632 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ಜಿಲ್ಲೆ ತಿಪಟೂರಿನಲ್ಲಿ ಇರುವ ಕಲ್ಪತರು ಕಾಲೇಜಿನಲ್ಲಿ ಸಾಮೂಹಿಕ ಅತ್ಯಾಚಾರ ಘಟನೆ ನಡೆದಿರುವುದು ನಿಜವೇ?*

ಆ) *ಹಾಗಿದ್ದಲ್ಲಿ ಈ ಘಟನೆಯಲ್ಲಿ ಎಷ್ಟು ಜನರು ಪಾಲ್ಗೊಂಡಿದ್ದರು ಹಾಗೂ ಅವರನ್ನು ದಸ್ತಗಿರಿ ಮಾಡಲಾಗಿದೆಯೇ?*

ಇ) *ದಸ್ತಗಿರಿಯಾದ ಎಲ್ಲರ ಮೇಲೂ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆಯೇ?*

ಈ) *ಮುಂದೆ ಇಂತಹ ಘಟನೆಗಳನ್ನು ತಡೆಗಟ್ಟಲು ತೆಗೆದುಕೊಳ್ಳುವ ಕ್ರಮ?*

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ) ಇಲ್ಲಾ, ಅಂತಹ ಪ್ರಸಂಗ ನಡೆಯಲಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ.

ಕಾವೇರಿ ಮೂರನೇ ಹಂತದ ಯೋಜನೆಗೆ ಇದುವರೆಗೆ ವೆಚ್ಚ ಮಾಡಿರುವ ಹಣ

2629 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಾವೇರಿ ಮೂರನೇ ಹಂತದ ಯೋಜನೆಗೆ ಇದುವರೆಗೆ ವೆಚ್ಚಮಾಡಿರುವುದೆಷ್ಟು?*

ಆ) *ಈ ಯೋಜನೆಯನ್ನು ಪೂರ್ಣಗೊಳಿಸಲು ಬೇಕಾಗುವ ಹಣವೆಷ್ಟು?*

ಇ) *ಈ ಯೋಜನೆಗೆ ಸರ್ಕಾರದಿಂದ, ಜೀವವಿಮಾ ಸಂಸ್ಥೆಯಿಂದ, ಕೇಂದ್ರ ಸರ್ಕಾರದಿಂದ, ಬಿ.ಡಿ.ಎ.ಯಿಂದ ಮಹಾನಗರ ಪಾಲಿಕೆಯಿಂದ ಹಾಗೂ ಇತರೆ ಸಂಸ್ಥೆಗಳಾದ ಹುಡ್ಕೋ ಹಾಗೂ ರಕ್ಷಣಾ ಇಲಾಖೆಗಳಿಂದ ಪಡೆದಿರುವಂತಹ ಧನ ಸಹಾಯವೆಷ್ಟು?*

ಈ) *ಈ ಯೋಜನೆಯು ಪೂರ್ಣಗೊಂಡಾಗ ದೊರೆಯುವ ನೀರಿನ ಪ್ರಮಾಣ ದಶಲಕ್ಷ ಲೀಟರ್‌ಗಳಲ್ಲಿ?*

ಉ) *ಈ ಯೋಜನೆಯ ಕಾರ್ಯಗಳು ಮುಗಿಯುವ ಅಂದಾಜಿನ ದಿನಾಂಕ?*